ಟ್ಯಾಕ್ಸಿ ಮನೆಯ ಮುಂದೆ ನಿಂತಿತು. ಮಗ ಟ್ಯಾಕ್ಸಿಯಿಂದಿಳಿದು ಬ್ಯಾಗನ್ನಿಳಿಸಿ ಎಳೆದು ತರುತ್ತಿದ್ದ. 'ಯಾಕೆ? ಅಲಕಾ, ಮತ್ತೆ ಮಕ್ಕಳೆಲ್ಲಿ?' ಎಂದು ಕೇಳಿದರು.

'ಅವಳು ಚಿಕ್ಕಮ್ಮನ ಮನೆಗೆ ಹೋದಳು, ಅಪ್ಪ!' ಎಂದ. 'ಮತ್ತೆ? ನೀನು ಹೋಗ್ಲಿಲ್ವಾ?' ಶ್ರೀಕಂಠಯ್ಯನವರ ದನಿಯಲ್ಲಿ ನೋವಿತ್ತು. 'ನಾನು ಅವರನ್ನು ಅಲ್ಲಿ ತಲುಪಿಸಿಯೇ ಇಲ್ಲಿ ಬಂದೆ, ಅಪ್ಪ!' ಎಂದ.

'ಆಯಿತು, ಬಿಡು. ಒಳ್ಳೇ ಕೆಲಸಾನೇ ಮಾಡಿದ್ದೀಯ. ತಪ್ಪಲ್ಲ; ಯಾರ್‍ಯಾರಿಗೆ ಎಲ್ಲಿ ಸುಖವೋ, ಅಲ್ಲಿಗೇ ಹೋಗಿರಲಿ' ಎಂದರು ಶ್ರೀಕಂಠಯ್ಯ. 'ನಿಮಗಾಗಿ ಮಾಳಿಗೆಯಲ್ಲಿ ವ್ಯವಸ್ಥೆ ಮಾಡಿದ್ದೆ. ಇರಲಿ. ನೀನು ರೆಸ್ಟ್ ತಗೊ. ಅಡುಗೆಯವನಿದ್ದಾನೆ. ಟಿಫಿನ್ ರೆಡಿ ಇದೆ. ಸ್ನಾನಕ್ಕೂ ವ್ಯವಸ್ಥೆ ಮಾಡಿಟ್ಟಿದೀನಿ.'

'ಯಾಕೆ ಬೇಸರ ಮಾಡಿಕೊಳ್ಳೋದು, ಅಪ್ಪ! ಬರ್ತಾಳೆ, ಬಿಡಿ. ತಿರುಗಿ ಹೋಗುವಾಗ ಬರ್ತೀನಿ ಅಂದಿದಾಳೆ.' ಶ್ರೀಕಂಠಯ್ಯ ಮಾತಾಡಲಿಲ್ಲ.

ರಾತ್ರಿ ಊಟವಾದ ನಂತರ ಮಗ ಅಪ್ಪನೊಡನೆ ಮಾತು ಪ್ರಾರಂಭಿಸಿದ. 'ಅಪ್ಪ! ನಿನಗೊಂದು ಮಾತು ಹೇಳ್ಬೇಕು ನಾನು. ನೀವೊಬ್ರೇ ಇಲ್ಲಿ ಎಷ್ಟು ಕಾಲ ಇರೋದಕ್ಕೆ ಸಾಧ್ಯ? ಬದಲಿಗೆ, ನೀವು ನಮ್ಮ ಜೊತೆಗೆ ಬಂದಿರಬಹುದಲ್ವಾ?'

'ಯಾಕೆ? ಇಷ್ಟು ವರ್ಷ ನಾನೊಬ್ನೇ ಕಾಲ ಕಳೀಲಿಲ್ವಾ?'

'ಆದ್ರೆ, ಇನ್ನು ಮುಂದೆ ಕಾಲ ಕಳಿಯೋದು ಕಷ್ಟ; ಅದು ನಿಮಗೆ ಗೊತ್ತು. ನಿಮಗೆ ವಯಸ್ಸಾಗ್ತಿದೆ, ಅಪ್ಪ!'

'ಸಾಯ್ತೀನಿ ಅಂತ ಹೇಳ್ತಿದೀಯ. ಯೋಚನೆ ಮಾಡಬೇಡ. ಸತ್ರೆ ಮುಂದಿನ ವ್ಯವಸ್ಥೆ ಮಾಡೋದಕ್ಕೆ ಜನ ಇದ್ದಾರೆ.'

'ಅದನ್ನ ಹೇಳ್ತಿಲ್ಲ, ಅಪ್ಪ! ನಮ್ಮ ಮನೆಯ ಕತೆ ಏನು?' ಸತೀಶನ ತುಸು ಗಡುಸಾಗಿಯೇ ಹೇಳಿದ. ಪ್ರಾಯಶಃ ಅವನಿಗೆ ಸಿಟ್ಟು ಬಂದಿತ್ತು.

'ಓ, ಅದಾ? ನಿನಗೆ ಚಿಂತೆ ಇರೋದು ಮನೇ ಬಗ್ಗೆ. ಅದು ನಿನಗೇ ಸೇರಬೇಕಾದದ್ದು ತಾನೆ?'

'ಸುಮ್ಮನೆ ಯಾಕೆ ಒಬ್ರೇ ಒದ್ದಾಡ್ತಿದೀರಿ ಅಪ್ಪ? ನೀವು ನಮ್ಮ ಜೊತೆಗೆ ಬಂದುಬಿಡಿ. ಮೊಮ್ಮಕ್ಕಳ ಜೊತೆಗೆ ಕಾಲ ಕಳೆದ ಹಾಗೆ ಆಗ್ತದೆ.'

'ನಾನು ಹಳೆಯ ಕಾಲದವನು. ಈ ಮುದಿವಯಸ್ಸಿನಲ್ಲಿ ಆ ದೇಶಕ್ಕೆ ಬಂದು ಏನು ಮಾಡೋದು? ನನಗದು ಹೊಂದಿಕೆಯಾಗೋದಿಲ್ಲ. ಇದು ನಿನಗೆ ಗೊತ್ತು. ಮಾತನಾಡೋಣ ಅಂದ್ರೆ, ಭಾಷೆ ಬರೋದಿಲ್ಲ. ಗುರುತು, ಪರಿಚಯವಂತೂ ಮೊದಲೇ ಇಲ್ಲ.'

'ಅಲ್ಲೂ ಈ ದೇಶದವರು ಇದ್ದಾರೆ, ಅಪ್ಪ! ನಾಕಾರು ದಿನ ಅಷ್ಟೇ; ಆ ಮೇಲೆ ನೀವೇ ಹೊಂದ್ಕೋತೀರ.'

ಶ್ರೀಕಂಠಯ್ಯ ತಲೆಯಾಡಿಸಿದರು.

'ಇನ್ನೊಂದು ವಿಷಯ, ಅಪ್ಪ! ನಾನು ಈಗಾಗ್ಲೇ ಹೊಸ ಮನೆ ಖರೀದಿ ಮಾಡಿದ್ದೇನೆ. ಈಗಿರೋ ಜಾಬ್ ಸರಿಯಿಲ್ಲ. ಈಗ ಅಲ್ಲಿ ರಿಸೆಶನ್. ಹೊಸ ಜಾಬ್ ಸಿಗೋದು ಕಷ್ಟ. ಹಾಗಂತ್ಲೇ ನನ್ನದೇ ಸ್ವಂತ ಉದ್ಯೋಗ ಶುರು ಮಾಡಬೇಕು ಅಂತ ಅಂದ್ಕೊಂಡಿದ್ದೇನೆ. ಅದಕ್ಕೆ... ತುರ್ತಾಗಿ ನನಗೊಂದಷ್ಟು ಹಣ ಬೇಕಾಗಿದೆ.'

'ಓ, ಇದಾ ವಿಷಯ! ನನಗೆ ಗೊತ್ತಿತ್ತಯ್ಯ! ಮನೆ ಮಾರಿ ಹಣ ಕೊಡಿಸು ಅಂತಿದೀಯ. ಅದನ್ನ